ವೈಷ್ಣವ ಸಾಹಿತ್ಯಗಳ ಬಗ್ಗೆ ಆಯಾ ಧರ್ಮಗಳಿಗೆ ಸೇರಿದವರು ಬರೆದಿರುವುದೇ ಜಾಸ್ತಿ. ಈ ಮಾತಿಗೆ ವಚನಗಳು ಮಾತ್ರ ಅಪವಾದವೇನೋ.

ಅದೇ ರೀತಿಯಲ್ಲಿ ಈಚಿನ ಕೆಲವು ದಶಕಗಳ ಓದುಗಳು ಸಾಮಾಜಿಕ ಪ್ರಸ್ತುತತೆ ಮತ್ತು ಸಾಂಸ್ಕೃತಿಕ ಆಶಯಗಳ ಹಿನ್ನೆಲೆಯಲ್ಲಿ ಪಂಪನ ಬಗ್ಗೆ ಯೋಚಿಸಲು ಪ್ರಯತ್ನಿಸಿವೆ. ಇಲ್ಲಿ ಪಠ್ಯವನ್ನು ಬಳಸಿಕೊಳ್ಳುವ ಸೂಕ್ಷ್ಮ ಓದುಗಳು ಇರುವ ಹಾಗೆಯೇ ಕೇವಲ ಆಶಯಗಳ ಸೀಮೆಯಲ್ಲಿ ಓಡಾಡಿ ಒರಟಾದ ತೀರ್ಮಾನಗಳನ್ನು ಕೊಟ್ಟಿರುವ ಓದುಗಳೂ ಇವೆ. ಇವೆಲ್ಲದರ ಹಿನ್ನೆಲೆಯಲ್ಲಿ ಪಂಪನ ಬರವಣಿಗೆಯನ್ನು ನಮ್ಮ ಕಾಲದ ಬದುಕಿನ ತಲ್ಲಣಗಳ ಹಿನ್ನೆಲೆಯಲ್ಲಿ ಮಾಡುವ ಕಿರುಪ್ರಯತ್ನವನ್ನು ಈ ಬರವಣಿಗೆಯಲ್ಲಿ ಮಾಡಲಾಗಿದೆ.

## 2

ಅ. 'ಆದಿ ಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ'ಗಳಲ್ಲಿ ಪಂಪನು ನಿರೂಪಿಸುವುದು ತನ್ನ ಕಾಲಕ್ಕಿಂತ ಬಹಳ ಬಹಳ ಹಿಂದೆ ನಡೆದ ಘಟನೆಗಳನ್ನು. ಭೌಗೋಳಿಕವಾಗಿಯೂ ಅವು ಅವನಿಗೆ ಅಪರಿಚಿತವೇ. ಆದರೆ, ಪಂಪನದು ನೂರಕ್ಕೆ ನೂರರಷ್ಟು ಅನುಭವಗಳಿಂದ ರೂಪಿತವಾದ ತಾತ್ವಿಕತೆ. ಪಂಪನು ನಿರೂಪಣೆಗಾಗಿ ಬೇರೆ ಬೇರೆ ಬಗೆಗಳನ್ನು ಬಳಸಿಕೊಂಡರೂ ಅವನ ಚಿತ್ರಣವು

